559(462) ಶ್ರೀ ಸೂರ್ಯನಾರಾಯಣ ರೆಡ್ಡಿ ಎನ್ (ಕುರುಗೋಡು) ಮಾನ್ಯ ಜಲ ಸಂಪನ್ಮೂಲ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ತುಂಗಭದ್ರಾ ಜಲಾಶಯದ ಬಲದಂಡೆ ಕಾಲುವೆಯ ದುರಸ್ತಿಯಾಗ ಬೇಕಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ, ದುರಸ್ತಿಗೊಳಿಸಲು ವಿಳಂಬವಾಗುತ್ತಿರುವ ಕಾರಣವೇನು?

ಇ) ದುರಸ್ತಿ ಕಾಮಗಾರಿಯನ್ನು ಯಾವಾಗ ಪೂರ್ಣಗೊಳಿಸಲಾಗುವುದು?

ಈ) ವೈ ಕಗ್ಗಲ್ ಮತ್ತು ಕುಡುತನಿ ಏತ ನೀರಾವರಿ ಯೋಜನೆಗಳನ್ನು ಇಲ್ಲಿಯವರೆಗೂ ಕೈಗೆತ್ತಿಕೊಳ್ಳದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಉ) ಹಾಗಿದ್ದಲ್ಲಿ, ವಿಳಂಬವಾಗುತ್ತಿರಲು ಕಾರಣವೇನು?

ಊ) ಈ ಯೋಜನೆಗಳನ್ನು ಯಾವಾಗ ಕೈಗೆತ್ತಿಕೊಂಡು ಪೂರ್ಣಗೊಳಿಸಲಾಗುವುದು?

ಶ್ರೀ ಕೆ ಎಸ್ ಈಶ್ವರಪ್ಪ (ಜಲಸಂಪನ್ಮೂಲ ಸಚಿವರು)

ಅ) ತುಂಗಭದ್ರಾ ಬಲದಂಡೆ ಮತ್ತು ಕಾಲುವೆಗಳು ತುಂಗಭದ್ರಾ ಮಂಡಳಿಯ ವ್ಯಾಪ್ತಿಗೆ ಬರುತ್ತದೆ

ತುಂಗಭದ್ರಾ ಬಲದಂಡೆ ಕಾಲುವೆ ವಿತರಣಾ ಕಾಲುವೆಗಳ ದುರಸ್ತಿ ಆಗಬೇಕಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆ

ಆ) ತುಂಗಭದ್ರಾ ಬಲದಂಡೆ ಮುಖ್ಯ ಕಾಲುವೆಗಳ ಆಧುನೀಕರಣ ಕಾಮಗಾರಿಗಳನ್ನು ತುಂಗಭದ್ರಾ ಮಂಡಳಿಯು ಕೈಗೊಂಡಿದೆ 2005–06ನೇ ಸಾಲಿನಲ್ಲಿ ರೂ 35 13 ಕೋಟಿಗಳ ಕಾಮಗಾರಿಗಳನ್ನು ಪೂರ್ಣಗೊಳಿಸಲಾಗಿದೆ

ರಾಜ್ಯ ಸರ್ಕಾರದ ವತಿಯಿಂದ ತುಂಗಭದ್ರಾ ಬಲದಂಡೆ ವಿತರಣಾ ಕಾಲುವೆಗಳ ಸಂಬಂಧ 2005–06ನೇ ಸಾಲಿನಲ್ಲಿ ರೂ 3 33 ಕೋಟಿ 2006–07ನೇ ಸಾಲಿನಲ್ಲಿ ರೂ 7 04 ಕೋಟಿ ಮೊತ್ತದ ಕಾಮಗಾರಿಗಳನ್ನು ಕೈಗೆತ್ತಿಕೊಂಡು ಪೂರ್ಣಗೊಳಿಸಲಾಗಿದೆ

ಇ) ಅನುದಾನದ ಲಭ್ಯತೆಗೆ ಅನುಗುಣವಾಗಿ ಹಂತ ಹಂತವಾಗಿ ವಿತರಣಾ ನಾಲಾಗಳ ದುರಸ್ತಿ ಕಾಮಗಾರಿಗಳನ್ನು ಪೂರ್ಣಗೊಳಿಸಲಾಗುವುದು

ಈ) ವೈ ಕಗ್ಗಲ್ ಏತ ನೀರಾವರಿ ಯೋಜನೆಯ ಕಾಮಗಾರಿಗಳನ್ನು 2005–06ನೇ ಸಾಲಿನಲ್ಲಿಯೇ ಪ್ರಾರಂಭಿಸಲಾಗಿದೆ ಹಾಗೂ ಕಾಮಗಾರಿಗಳು ಪ್ರಗತಿಯಲ್ಲಿವೆ

ಕುಡುತನಿ ಏತ ನೀರಾವರಿ ಯೋಜನೆಯು ಸಣ್ಣ ನೀರಾವರಿ ಇಲಾಖೆಯ ವ್ಯಾಪ್ತಿಯಲ್ಲಿ ಬರುತ್ತದೆ

ಉ) ಮೇಲಿನ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ

ಊ) ವೈ–ಕಗ್ಗಲ್ ಏತ ನೀರಾವರಿ ಯೋಜನೆಯನ್ನು 2008–09 ರಲ್ಲಿ ಪೂರ್ಣಗೊಳಿಸಲು ಯೋಜಿಸಲಾಗಿದೆ

560(693) ಶ್ರೀ ಉಮಾಪತಿ ಎ ವಿ. (ಹೊಳಲ್‌ಕೆರೆ) ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಪದವಿ ಪೂರ್ವ ಕಾಲೇಜುಗಳಲ್ಲಿ ಕೊರಡಿಗಳ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಬಂದಿದ್ದಲ್ಲಿ, ಹೊಸ ಕೊರಡಿಗಳ ನಿರ್ಮಾಣಕ್ಕೆ ಸರ್ಕಾರ ಯಾವ ಕ್ರಮ ಕೈಗೊಂಡಿದೆ?

ಶ್ರೀ ಬಸವರಾಜ ಎಸ್ ಹೊರಟ್ಟಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು)

ಅ) ಬಂದಿದೆ

ಆ) 2006–07ನೇ ಸಾಲಿಗೆ ರಾಜ್ಯವಲಯ ಯೋಜನೆಯಡಿ ರೂ 200 00 ಲಕ್ಷಗಳನ್ನು ಮುಂದುವರೆದ ಕಾಮಗಾರಿಗಳಿಗಾಗಿ ಮತ್ತು ಅಪೆಂಡಿಕ್ಸ್ – ಇ ನಲ್ಲಿ ರೂ 23 08 ಕೋಟಿಗಳನ್ನು 244 ಕಾಮಗಾರಿಗಳ ಅನುಷ್ಠಾನಕ್ಕಾಗಿ ಬಿಡುಗಡೆ ಮಾಡಲಾಗಿದೆ

2006–07ನೇ ಸಾಲಿಗೆ ಆರ್ ಐ ಡಿ ಎಫ್–11ರಡಿ ರೂ 30 00 ಕೋಟಿ ವೆಚ್ಚದಲ್ಲಿ 403 ಸ ಪ ಪೂ ಕಾಲೇಜುಗಳಿಗೆ ಕೊರಡಿಗಳನ್ನು ಒದಗಿಸಲು ಅನುಮತಿ ನೀಡಿ ಈಗಾಗಲೇ ರೂ 10 00 ಕೋಟಿಗಳನ್ನು ಬಿಡುಗಡೆ ಮಾಡಲಾಗಿದೆ

ಆರ್ ಐ ಡಿ ಎಫ್–12 ರಡಿ 362 ಸರ್ಕಾರಿ ಪ ಪೂ ಕಾಲೇಜುಗಳಿಗೆ 557 ಹೆಚ್ಚುವರಿ ಕೊರಡಿಗಳನ್ನು, 94 ಹೊಸ ಕಾಲೇಜುಗಳಿಗೆ ಹೊಸ ಕಟ್ಟಡಗಳನ್ನು ಒದಗಿಸಲು ರೂ 60 00 ಕೋಟಿಗಳಿಗೆ ಮಂಜೂರಾತಿ ದೊರೆತಿದ್ದು, ಶೀಘ್ರವಾಗಿ ಕಾಮಗಾರಿ ಪ್ರಕ್ರಿಯೆಯನ್ನು ಪ್ರಾರಂಭಿಸಲು ಕ್ರಮ ಕೈಗೊಳ್ಳಲಾಗುತ್ತಿದೆ